ಅವರು ಬಾಯಿಬಿಟ್ಟು ಹೇಳದಿದ್ದರೂ ಅವರ ಈಸ್ತೆಟಿಕ್ಸ್‌ಗೆ ಅದು ಹೊಂದುವುದಿಲ್ಲ. ಹಾಗಾದರೆ ನಿಜವಾಗಿ ಈ ಈಸ್ತೆಟಿಕ್ಸ್ ಅಂದರೆ ಏನು?

“ನಾವು ಈಸ್ತೆಟಿಕ್ಸ್ ಅಂದರೆ ಸಾಮಾನ್ಯವಾಗಿ ಸುಂದರವಾದದ್ದು ಅಂತ ಭಾವಿಸಿಕೊಂಡಿದ್ದೇವೆ. ಅದು ಹಾಗಲ್ಲ, ಅದೊಂದು ವ್ಯವಸ್ಥೆ, ರಚನೆ. ಈಗ ಪೋಡಿಯಂ ತೆಗೆದುಕೊಳ್ಳಿ. ಅದಕ್ಕೊಂದು ಉದ್ದೇಶವಿದೆ. ನಾನಲ್ಲಿ ನಿಂತು ಮಾತನಾಡಲು, ನೋಟ್ಸ್ ಇತ್ಯಾದಿ ಇಟ್ಟುಕೊಳ್ಳಲು ಅದು ಬೇಕು. ಅದರ ಆಕಾರ, ಸ್ವರೂಪ ಇವೆಲ್ಲಾ ಅನಂತರ ಬರುತ್ತದೆ. ಇವೆಲ್ಲಾ ಒಟ್ಟಾಗಿ ಅದರ ಈಸ್ತೆಟಿಕ್ಸ್‌ನ್ನು ನಿರ್ಧರಿಸುತ್ತವೆ. ಉದ್ದೇಶಕ್ಕೆ ಪೂರಕವಲ್ಲದಿದ್ದರೆ ಅದೆಷ್ಟೇ ಸುಂದರವಾಗಿದ್ದರೂ ನಾವದನ್ನು ಒಪ್ಪಿಕೊಳ್ಳುವುದಿಲ್ಲ. ಕಲೆಯ ವಿಷಯದಲ್ಲೂ ಇದು ನಿಜ. ಅದರ ಉದ್ದೇಶ, ಸ್ವರೂಪ ಇವೆಲ್ಲಾ ಸೇರಿ ಕಲೆಯ ಈಸ್ತೆಟಿಕ್ಸ್ ನಿರ್ಧಾರವಾಗುತ್ತದೆ. ಒಂದು ಕೃತಿಯನ್ನು ಕರ್ನಾಟಕ ಶಾಸ್ತ್ರೀಯ ಸಂಗೀತದ ಭಾಗವಾಗಿ ಹಾಡುವುದಕ್ಕೂ, ಅದನ್ನು ಭಜನಾ ಮಂಡಳಿಯ ಭಾಗವಾಗಿ ಹಾಡುವುದಕ್ಕೂ ಇರುವ ಉದ್ದೇಶ ಬೇರೆ. ಹಾಗಾಗಿ ಸಂದರ್ಭಾನುಸಾರವಾಗಿ ಅದರ ಈಸ್ತೆಟಿಕ್ಸ್ ಕೂಡ ಬೇರೆಯಾಗುತ್ತದೆ. ಸಮಾಜ ಬದಲಾದಾಗ ಕಲೆಯ ಈಸ್ತೆಟಿಕ್ಸ್ ಬದಲಾಗುತ್ತದೆ. ಹಾಗೆಯೇ ಈಸ್ತೆಟಿಕ್ಸ್ ಸಮಾಜವನ್ನೂ ಪ್ರಭಾವಿಸುತ್ತದೆ. ದುರಂತವೆಂದರೆ ನಮ್ಮ ಸಾಮಾಜಿಕ, ರಾಜಕೀಯ ಚರ್ಚೆಯಲ್ಲಿ ಸಾಮಾನ್ಯವಾಗಿ ಈಸ್ತೆಟಿಕ್ಸ್ ಅನ್ನು ಚರ್ಚಿಸುವುದೇ ಇಲ್ಲ. ತಾರತಮ್ಯದ ಬಗ್ಗೆ ಮಾತನಾಡುವಾಗ ಈಸ್ತೆಟಿಕ್ಸ್ ಬಗ್ಗೆಯೂ ಮಾತನಾಡಬೇಕು. ಆಗ ನಮಗೆ ನಾವು ಸೃಷ್ಟಿಸಿರುವ ವಿಕೃತಿಗಳ ಅರಿವಾಗುತ್ತದೆ. ಒಂದನ್ನು ಸುಂದರ ಅನ್ನುವಾಗಲೇ ಉಳಿದವು ಸುಂದರವಲ್ಲ ಎನ್ನುತ್ತಿರುತ್ತೇವೆ. ನಮ್ಮ ಸಾಮಾಜಿಕ ಸ್ಥಾನಮಾನ ನಮ್ಮ ಸೌಂದರ್ಯದ ಪರಿಕಲ್ಪನೆಯನ್ನು ನಿರ್ಧರಿಸುತ್ತಿರುತ್ತದೆ. ನಮಗೆ ಉಭಯಲಿಂಗಿ ಸುಂದರವಾಗಿ ಕಾಣುವುದಕ್ಕೆ ಸಾಧ್ಯವೇ ಇಲ್ಲ. ಇಂತಹ ಮನಃಸ್ಥಿತಿ ನಮ್ಮನ್ನು ವಿಭಜಿಸುತ್ತಾ ಹೋಗುತ್ತದೆ. ಈ ಕ್ಲಿಷ್ಟಕರವಾದ ವಿಚಾರಗಳೊಳಕ್ಕೆ ಹೆಚ್ಚೆಚ್ಚು ಇಳಿದಂತೆ, ಇವು ಹೆಚ್ಚೆಚ್ಚು ಅರ್ಥವಾದಂತೆ ನಾನು ಹೆಚ್ಚೆಚ್ಚು ಸ್ವತಂತ್ರನಾದೆ ಅನ್ನಿಸುತ್ತಿದೆ. ಎಷ್ಟೋ

